ಕರ್ನಾಟಕ ಸರ್ಕಾರ ನಡವಳಿಗಳು

ವಿಷಯ : **2018-19ನೇ** ಸಾಲಿನಲ್ಲಿ 2013-14 ರಿಂದ 2017-18ನೇ ಸಾಲಿನವರೆಗೆ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಪಾವತಿಸಲು ಬಾಕಿ ಇರುವ ಕೇಂದ್ರ ಸಹಾಯಧನ ಮತ್ತು ಟರ್ನ ಕೀ ಫೀ ಹಾಗೂ ನಿರ್ವಹಣ ವೆಚ್ಚವನ್ನು ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ :
1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 5-40/2013-ಬಿಇ(ಪಿಟಿ) ದಿನಾಂಕ 24.09.2018 & 29.09.2018.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ ರವರ ಪತ್ರ ಸಂಖ್ಯೆ ಜಿಪಂ/ಅವಿ/ರಾಜೈಅಯೋ /ವಿವ/02/2017-18, ದಿನಾಂಕ 07.07.2018.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ ರವರ ಪತ್ರ ಸಂಖ್ಯೆ ಜಿಪಂಶಿ/ಅಭಿ/ವಿವ-___/201718, ದಿನಾಂಕ 04.04.2018.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾಸನ ರವರ ಪತ್ರ ಸಂಖ್ಯೆ ಜಿಪಂಹಾ/ಜೈಅಯೋ/ಯೋಅ /6/2018-19, ದಿನಾಂಕ 11.07.2018.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ ರವರ ಪತ್ರ ಸಂಖ್ಯೆ ಹಾಜಿಪಂ/ಅಭಿ/ರಾಜೈಯೋ /ಅನುದಾನದ ವಿವರ/1/2018-19, ದಿನಾಂಕ 18.07.2018.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ ರವರ ಪತ್ರ ಸಂಖ್ಯೆ ರಾಜಿಪಂ/ಜೈಅಯೋ-01-2018-19, ದಿನಾಂಕ 30.07.2018.
7. ಸರ್ಕಾರದ ಪತ್ರ ಸಂಖ್ಯೆ ಗ್ರಾಅಪ 75 ಜೈಅಯೋ 2015(ಪಿ1), ದಿನಾಂಕ 13.11.2018.

## ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದಂತೆ ನವ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯ, ನವ ದೆಹಲಿಯು **2014-15ನೇ** ಸಾಲಿಗೆ ಸಂಬಂಧಿಸಿದಂತೆ ಕೇಂದ್ರ ಸಹಾಯಧನ **ರೂ.384.65ಲಕ್ಷ**ಗಳನ್ನು ರಾಷ್ಟ್ರೀಯ ಜೈವಾನಿಲ ಗೊಬ್ಬರ ಮತ್ತು ನಿರ್ವಹಣೆ(NBMMP) ಕಾರ್ಯಕ್ರಮದಡಿ (Public Financial Management System-PFMS) ಬಿಡುಗಡೆ ಮಾಡಿದೆ.

ಮೇಲೆ (2) ರಿಂದ (6)ರವರೆಗೆ ಓದಲಾದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ, ಶಿವಮೊಗ್ಗ, ಹಾಸನ, ಹಾವೇರಿ ಮತ್ತು ರಾಮನಗರ ರವರ ಕೋರಿಕೆಯನ್ವಯ **2013-14ನೇ** ಸಾಲಿನಿಂದ **2017-18ನೇ** ಸಾಲಿನವರೆಗೆ ರಾಷ್ಟ್ರೀಯ ಜೈವಾನಿಲ ಗೊಬ್ಬರ ಮತ್ತು ನಿರ್ವಹಣೆ(NBMMP) ಕಾರ್ಯಕ್ರಮದಡಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಸಂಬಂಧಿಸಿದಂತೆ **ರೂ.288.60ಲಕ್ಷ**ಗಳ ಕೇಂದ್ರ ಸಹಾಯಧನ ಹಾಗೂ ಟರ್ನ ಕೀ ಫೀ ಹಾಗೂ ನಿರ್ವಹಣೆ ವೆಚ್ಚ ಪಾವತಿಸಲು ಬಾಕಿ ಇರುತ್ತದೆ.

ಪ್ರಸ್ತುತ ಕಾರ್ಯಕ್ರಮದಡಿ ಲಭ್ಯವಿರುವ ಅನುದಾನದಲ್ಲಿ ಒಟ್ಟಾರೆ **ರೂ.288.60ಲಕ್ಷ**ಗಳನ್ನು **2013-14ನೇ** ಸಾಲಿನಿಂದ **2017-18ನೇ** ಸಾಲಿನವರೆಗೆ ನವ ರಾಷ್ಟ್ರೀಯ ಜೈವಾನಿಲ ಗೊಬ್ಬರ ಮತ್ತು ನಿರ್ವಹಣೆ(NBMMP) ಕಾರ್ಯಕ್ರಮದಡಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ಕೇಂದ್ರ ಸಹಾಯಧನ ಹಾಗೂ ಟರ್ನ ಕೀ ಫೀ ಹಾಗೂ ನಿರ್ವಹಣಾ ವೆಚ್ಚ ಪಾವತಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ, ಶಿವಮೊಗ್ಗ, ಹಾಸನ, ಹಾವೇರಿ ಮತ್ತು ರಾಮನಗರ ರವರಿಗೆ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/66/ಜೈಅಯೋ/2018 ಬೆಂಗಳೂರು, ದಿನಾಂಕ 11.12.2018**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ **2018-19ನೇ** ಸಾಲಿನಲ್ಲಿ **2013-14ನೇ** ಸಾಲಿನಿಂದ **2017-18ನೇ** ಸಾಲಿನವರೆಗೆ ರಾಷ್ಟ್ರೀಯ ಜೈವಾನಿಲ ಗೊಬ್ಬರ ಮತ್ತು ನಿರ್ವಹಣೆ(NBMMP) ಕಾರ್ಯಕ್ರಮದಡಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ಕೇಂದ್ರ ಸಹಾಯಧನ ಹಾಗೂ ಟರ್ನ ಕೀ ಫೀ ಹಾಗೂ ನಿರ್ವಹಣಾ ವೆಚ್ಚವನ್ನು ಆಯಾ ಸಾಲಿನ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ನಿಯಮಾನುಸಾರ ಪರಿಶೀಲಿಸಿ ಪಾವತಿಸಲು ರೂ.288.60ಲಕ್ಷ(ಇನ್ನೂರಾ ಎಂಬತ್ತೆಂಟು ಲಕ್ಷದ ಆರವತ್ತು ಸಾವಿರ ರೂಪಾಯಿಗಳು ಮಾತ್ರ)ಗಳನ್ನು

ಈ ಕೆಳಕಂಡ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

| ಕ್ರಸಂ | ಜಿಲ್ಲಾ ಪಂಚಾಯತ್ | ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ಬೆಳಗಾವಿ | 157.65 |
| 2 | ಶಿವಮೊಗ್ಗ(*) | 111.46 |
| 3 | ಹಾಸನ | 11.04 |
| 4 | ಹಾವೇರಿ | 6.95 |
| 5 | ರಾಮನಗರ | 1.50 |
| | ಒಟ್ಟು | **288.60** |

(*) ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ ರವರು ರೂ.161.97ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿದ್ದು, ಈ ಪೈಕಿ ಶಿವಮೊಗ್ಗ ಜಿಲ್ಲಾ ಪಂಚಾಯತ್‌ನಲ್ಲಿ ಕಾರ್ಯಕ್ರಮದಡಿ ಲಭ್ಯವಿದ್ದ ಅನುದಾನ ರೂ.50.51ಲಕ್ಷಗಳನ್ನು ವಿನಿಯೋಗಿಸಲು ಮೇಲೆ ಓದಲಾದ (7)ರಲ್ಲಿ ಅನುಮತಿಸಿರುವ ಮೇರೆಗೆ ರೂ.111.46ಲಕ್ಷ (ರೂ.161.97ಲಕ್ಷ–ರೂ.50.51ಲಕ್ಷ=111.46ಲಕ್ಷ)ಗಳನ್ನು ಬಿಡುಗಡೆ ಮಾಡಿದ್ದು, ವಿಶೇಷ ಮರು ಪರಿಶೀಲನಾ ತಂಡದ ವರದಿಯನ್ವಯ ಪರಿಶೀಲಿಸಿ ಪಾವತಿಸುವುದು.

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗುತ್ತಿದ್ದು, ಉದ್ದೇಶಿತ ಕಾರ್ಯಕ್ರಮಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಹಾಗೂ ವ್ಯಪಗತ ಮಾಡತಕ್ಕದಲ್ಲ.

ಪ್ರಸ್ತುತ **PFMS** ತಂತ್ರಾಂಶದಲ್ಲಿ ಬಿಡುಗಡೆ ಮಾಡುತ್ತಿರುವ ಸದರಿ ಅನುದಾನವನ್ನು ಮಾರ್ಗಸೂಚಿಯನ್ವಯ ಗಾಂಧಿ ಸಾಕ್ಷಿ ಕಾಯಕದಡಿ ಇಂಧೀಕರಿಸಿ, **PFMS** ತಂತ್ರಾಂಶದಲ್ಲಿ ಬಿಡುಗಡೆ ಮಾಡತಕ್ಕದ್ದು. ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ **2810-60-196-6-01**ರಡಿ ವೆಚ್ಚ ಭರಿಸಿ, ನಿಗದಿತ ನಮೂನೆಯಲ್ಲಿ ಹಣಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ನೀಡುವುದು

ಈ ಆದೇಶವನ್ನು ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂಖ್ಯೆ: ಗ್ರಾಅಪ **395** ಪಿಬಿಎಸ್ **2018**, ದಿನಾಂಕ **27.11.2018**ರಲ್ಲಿ ಸಹಮತಿಯನ್ನು ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಕೃಷ್ಣಪ್ಪ) 11/12/18
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ / ಮುಖ್ಯ ಲೆಕ್ಕಾಧಿಕಾರಿ. ಜಿಲ್ಲಾ ಪಂಚಾಯತ್, ಬೆಳಗಾವಿ, ಶಿವಮೊಗ್ಗ, ಹಾಸನ, ಹಾವೇರಿ ಮತ್ತು ರಾಮನಗರ.
3. ವಿಶೇಷ ಅಧಿಕಾರಿಗಳು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು :

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾ) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿಗಳು.